ಶ್ರೀ ಜೆ ಎಸ್. ದೇಶಮುಖ್ (ವಿದ್ಯುತ್, ಗಣಿ, ಹಾಗೂ ಭೂವಿಜ್ಞಾನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ ೧೯೮೩-೮೪ನೇ ಇಸವಿಯ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಹದಿನಾಲ್ಕನೆಯ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೫೬ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆಯ ಶಾಸನದ ೧೬(೨)ನೇ ಕಲಮಿನ ಮೇರೆಗೆ.

ಸೈನಿಕರು ಹಾಗೂ ಅವರ ಕುಟುಂಬದವರ ಕಲ್ಯಾಣದ ಉದ್ದೇಶಕ್ಕಾಗಿಯೇ ಉಪಯೋಗಿಸಿದ ವಾಹನ ಸಂಖ್ಯೆ ಸಿಎಬಿ ೯೨೯೫ಕ್ಕೆ ನೀಡಬೇಕಾದ ತೆರಿಗೆ ವಿನಾಯಿತಿಗೊಳಿಸುವುದಕ್ಕೆ ಸಂಬಂಧಪಟ್ಟಂತೆ ೬ನೇ ಆಗಸ್ಟ್ ೧೯೮೫ನೇ ದಿನಾಂಕದಂದು ಹೊರಡಿಸಲಾದ ಎಫ್‌ಟಿಡಿ ೨೨೦ ಟಿಎಟಿ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು

ವರದಿಗಳನ್ನು ಒಪ್ಪಿಸುವುದು

ಶ್ರೀ ಎಂ. ವೀರಪ್ಪ ಮೊಯಿಲಿ (ಅಧ್ಯಕ್ಷರು).—ಮಾನ್ಯ ಅಧ್ಯಕ್ಷರೆ,

ಅ) ಒಳಾಡಳಿತ ಇಲಾಖೆಗೆ ಸಂಬಂಧಿಸಿದಂತೆ ೫ನೇ ವರದಿಯಲ್ಲಿರುವ (೧೯೮೦-೮೨) (ಆರನೆಯ ವಿಧಾನ ಸಭೆ) ಶಿಫಾರಸ್ಸುಗಳ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮದ ಮೇಲಿನ ಮೂರನೆಯ ವರದಿ,

ಆ) ಶಿಕ್ಷಣ ಹಾಗೂ ಕಂದಾಯ ಇಲಾಖೆಗಳಿಗೆ ಸಂಬಂಧಿದಂತೆ ೨ ಹಾಗೂ ೧೪ನೇ ವರದಿಗಳಲ್ಲಿರುವ (೧೯೮೦-೮೨) (ಆರನೆಯ ವಿಧಾನ ಸಭೆ) ಶಿಫಾರಸ್ಸುಗಳ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮದ ಮೇಲಿನ ನಾಲ್ಕನೆಯ ವರದಿ,

ಇ) ೧೯೮೧-೮೨ ಹಾಗೂ ೧೯೮೨-೮೩ನೇ ಸಾಲುಗಳ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಅಧಿಕೃತವಾಗಿ ಪುರಸ್ಕೃತವಾದ ಅನುದಾನಗಳು ಹಾಗೂ ಪ್ರಭೃತ ವಿನಿಯೋಗಗಳಿಗೆ ಸಂಬಂಧಪಟ್ಟ ಐದನೆಯ ವರದಿ,

ಈ) ರೇಷ್ಮೆ ಇಲಾಖೆಯಲ್ಲಿ ಬಿ. ಒ. ಡಿ. ಕಾವು ಪೆಟ್ಟಿಗೆಗಳ ಖರೀದಿಗೆ ಸಂಬಂಧಿಸಿದಂತೆ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ಮೇಲಿನ ಆರನೆಯ ವರದಿಗಳನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆ

ಬೆಂಗಳೂರು ಜಿಲ್ಲೆಯ ಹುಲಿಮಂಗಲ ಆರೋಗ್ಯ ಉಪಕೇಂದ್ರದ ಎ.ಎನ್. ಎಂ. ರವರಿಗೆ ಸಂಬಳ ಹಾಗೂ ಇತರೆ ಭತ್ಯೆಗಳನ್ನು ನೀಡದಿರುವ ಬಗ್ಗೆ

ಶ್ರೀ ಕೆ ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಿಲ್ಲೆಯ ಹುಲಿಮಂಗಲ ಆರೋಗ್ಯ ಉಪಕೇಂದ್ರದ ಎ.ಎನ್ ಎಂ. ರವರಿಗೆ ಸಂಬಳ ಹಾಗೂ ಇತರೆ ಭತ್ಯೆಗಳನ್ನು ವಿತರಣೆ ಮಾಡದಿರುವ ವಿಚಾರದ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಆರೋಗ್ಯ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಆರೋಗ್ಯ ಮಂತ್ರಿಗಳಿಗೆ ಅನಾರೋಗ್ಯವಾಗಿದೆಯೇ ?

ಶ್ರೀ ಡಿ. ಮಂಜುನಾಥ್.—ಅವರು ಕೌನ್ಸಿಲ್‌ನಲ್ಲಿದ್ದಾರೆ.

ಅಧ್ಯಕ್ಷರು.—ಆರೋಗ್ಯ ಮಂತ್ರಿಗಳು ಕೌನ್ಸಿಲ್‌ಗೆ ಹೋಗಿದ್ದಾರೆ, ಇದನ್ನು ಆಮೇಲೆ ತೆಗೆದು ಕೊಳ್ಳೋಣ

ಶ್ರೀ ಆರ್. ಎನ್. ನಾಯಕ್.—೩೦ ಜನ ಮಂತ್ರಿಗಳಿದ್ದಾರೆ, ಏನು ಕಷ್ಟ ಇದು.

ಶ್ರೀ ಎಸ್. ಬಂಗಾರಪ್ಪ.—ಅವರು ಕೌನ್ಸಿಲ್‌ಗೆ ಹೋಗಿದ್ದರೆ, ಅಲ್ಲಿ ಕೂಡ ಅರ್ಜೆಂಟ್ ವರ್ಕ್ ಇದ್ದರೆ ಇರಬಹುದು. ಗಮನ ಸೆಳೆಯುವ ಸೂಚನೆಯ ವಿಷಯದ ಮೇಲೆ ಕೆಲವು ವಿವರಣೆಗಳು ಮತ್ತೊಂದು ಕೇಳಬೇಕಾಗುತ್ತದೆ.

ಅಧ್ಯಕ್ಷರು.—ಇದನ್ನು During the course of the day ತೆಗೆದುಕೊಳ್ಳುತ್ತೇನೆ. ಈಗ ಮುಂದಿನ ಗಮನ ಸೆಳೆಯುವ ಸೂಚನೆ ಚಂದ್ರಶೇಖರ್ ಅವರದ್ದು, ಅವರು ಕೇಳಲಿ ಈಗ ಅವರೂ ಇಲ್ಲ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಹೆಲ್ತ್ ಡಿಪಾರ್ಟ್‌ಮೆಂಟಿಗೆ ಇಬ್ಬರು ಮಂತ್ರಿಗಳಿದ್ದಾರೆ.

ಅಧ್ಯಕ್ಷರು.—ನೆಕ್ಸ್ಟ್ ಕಾಲಿಂಗ್ ಅಟೆನ್‌ಷನ್ ಕರೆದರೂ ಮೆಂಬರ್ ಇಲ್ಲ.

ಶ್ರೀ ಪಿ. ಜಿ. ಆರ್ ಸಿಂಧ್ಯ.—ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಇಬ್ಬರು ಮಂತ್ರಿಗಳಿದ್ದಾರೆ. ಈ ವಿಚಾರ ಸ್ವಲ್ಪ ಚರ್ಚೆಯಾಗಬೇಕು

ಅಧ್ಯಕ್ಷರು.—ನಾನು ಈಗಾಗಲೇ ಇದನ್ನು During the course of the day ತೆಗೆದು ಕೊಳ್ಳುತ್ತೇನೆ, ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ, ತಾವೂ ಕೂಡ ಒಪ್ಪಿದಿರಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಗೆ ಇಬ್ಬರು ಮಂತ್ರಿಗಳಿದ್ದಾರೆ, ಈ ಇಬ್ಬರೂ ಮಂತ್ರಿಗಳೂ ಆ ಸದನದಲ್ಲಿದ್ದಾರೆಯೇ ? ತಾವು ಅಷ್ಟು ವಿಚಾರ ಹೇಳಿದರೆ ಸಾಕು.

ಅಧ್ಯಕ್ಷರು.—ನಾನು ಮುಂದೆ ಹೋಗಿದ್ದೇನೆ. ಅದನ್ನು ಅವರು ಬಂದಾಗ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮುಂದಕ್ಕೆ ಹೋದರೆ ಸ್ವಲ್ಪ ಹಿಂದಕ್ಕೆ ಬರಬೇಕಾಗುತ್ತದೆ ಹೆಲ್ತ್ ಡಿಪಾರ್ಟ್‌ಮೆಂಟಿಗೆ ಇಬ್ಬರು ಮಂತ್ರಿಗಳಿರುವಾಗ ಒಬ್ಬರು ಆ ಸದನದಲ್ಲಿದ್ದಾಗ, ಇನ್ನೊಬ್ಬರು ಈ ಸದನದಲ್ಲಿ ಏಕೆ ಇರಬಾರದು ಎನ್ನುವುದು ಪ್ರಶ್ನೆ

ಅಧ್ಯಕ್ಷರು.—ನಾನು ಈಗಾಗಲೇ ಮುಂದೆ ಹೋಗಿದ್ದೇನೆ. ಅವರು ಬಂದಾಗ ಕೇಳೋಣ

ಶ್ರೀ ಬಿ. ರಾಚಯ್ಯ.—ಇಬ್ಬರು ಮಂತ್ರಿಗಳಿಗೂ ಬೇರೆ ಬೇರೆ ವಿಷಯಗಳನ್ನು ಹಚ್ಚಿದ್ದಾರೆ. ಇಬ್ಬರದೂ ಉತ್ತರ ಅಲ್ಲಿದೆ ಅವರು ಅಲ್ಲಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇಬ್ಬರೂ ಆ ಸದನದಲ್ಲಿದ್ದಾರೆಯೇ?

ಶ್ರೀ ಬಿ. ರಾಚಯ್ಯ.—ಮಾನ್ಯ ಬಂಗಾರಪ್ಪನವರು ಸುಮ್ಮನೆ ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸುಮ್ಮನೆ ಆ ರೀತಿ ಮಾತನಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಈಗ ಆರೋಗ್ಯ ಸಚಿವರು ಬಂದರು

ಶ್ರೀ ಎಸ್. ಬಂಗಾರಪ್ಪ.—ಆರೋಗ್ಯ ಸಚಿವರು ಬಂದರು, ಸಂತೋಷ ಉತ್ತರ ಹೇಳಲಿ. ಆದರೆ ಇನ್ನೊಬ್ಬ ರಾಜ್ಯ ಸಚಿವರು ಇದ್ದಾರಲ್ಲ. ಅವರು ಇರಬಹುದಾಗಿತ್ತು.

ಅಧ್ಯಕ್ಷರು.—ಈಗ ಆರೋಗ್ಯ ಸಚಿವರು ಬಂದರು, ಉತ್ತರ ಹೇಳುತ್ತಾರೆ. ಪ್ರತಾಪಚಂದ್ರ ಶೆಟ್ಟರು ಕಾಲ್ ಅಟೆನ್‌ಷನ್ ಕರೆಯಲಿ

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಿಲ್ಲೆಯ ಹುಲಿಮಂಗಲ ಆರೋಗ್ಯ ಉಪ ಕೇಂದ್ರದ ಎ.ಎನ್.ಎಂ. ರವರಿಗೆ ಸಂಬಳ ಹಾಗೂ ಇತರೆ ಭತ್ಯೆಗಳನ್ನು ಪಿತರಣೆ ಮಾಡದಿರುವ ವಿಚಾರದ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಶ್ರೀಮತಿ ಸಿಸಿಲಿಯಾ ಅವರ ವೇತನವನ್ನು ಏಪ್ರಿಲ್ ೮೫ರ ಅಂತ್ಯದವರೆಗೆ ನೀಡಲಾಗಿದೆ. ಮೇ ಮತ್ತು ಜೂನ್ ೮೫ರ ವೇತನವನ್ನು ''ಅಟೆಂಡೆನ್ಸ್ ಎಕ್ಸ್ಟ್ರಾಕ್ಟ್'' ಬಂದಿರಲಿಲ್ಲವಾದ ಕಾರಣ ಆನೇಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ತಡೆಹಿಡಿದಿದ್ದರು. ಅಟೆಂಡೆನ್ಸ್ ಎಕ್ಸ್ಟ್ರಾಕ್ಟ್ ಬಂದನಂತರ ಮೇ ಮತ್ತು ಜೂನ್ ೮೫ರ ಮಾಹೆಯ ವೇತನವನ್ನು ತರಿಸಿ ಬಟವಾಡೆ ಮಾಡಲಾಗಿದೆ. ಜೂನ್ ೮೫ರ ಮಾಹೆಯ ಅಟೆಂಡೆನ್ಸ್ ಎಕ್ಸ್ಟ್ರಾಕ್ಟ್ ಅನ್ನು ಸದರಿ ಸಹಾಯಕ ಶುಶ್ರೂಷಾ ದಾದಿಯವರು ತಾವು ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿಗಳ ಅಂದರೆ ಪ್ರಾಥಮಿಕ ಆರೋಗ್ಯ ಘಟಕದ ಜಿಗಣಿಯ ವೈದ್ಯಾಧಿಕಾರಿಗಳಿಂದ ಸಹಿ ಪಡೆಯಲು ತೆಗೆದುಕೊಂಡು ಹೋಗಿದ್ದರು ಆದ್ದರಿಂದ ಮೇ ಮತ್ತು ಜೂನ್ ೮೫ರ ಸಂಬಳವನ್ನು ೦೭-೭-೮೫ ರಂದು ತರಿಸಿ ಕೊಡಲಾಗಿದೆ. ಪ್ರಾಥಮಿಕ ಆರೋಗ್ಯ ಘಟಕ ಜಿಗಣಿಯ ವೈದ್ಯಾಧಿಕಾರಿಗಳಿಂದ ಬಂದ ''ಅಟೆಂಡೆನ್ಸ್ ಎಕ್ಸ್ಟ್ರಾಕ್ಟ್'' ನಲ್ಲಿ ದಿನಾಂಕ ೧-೭-೮೫, ೧೫-೭-೮೫ ಮತ್ತು ೧೬-೭-೮೫ ರ ದಿನಗಳಿಗೆ ಗೈರು ಹಾಜರಿಯನ್ನು ಗುರ್ತಿಸಲಾಗಿದ್ದರಿಂದ, ಆನೇಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ನಗರ ಭತ್ಯೆಯಾ ಸೇರಿದಂತೆ ೨೮ ದಿನಗಳಿಗೆ ಮಾತ್ರ ಸಂಬಳವನ್ನು ಮಾಡಿದ್ದಾರೆ. (ಗೈರುಹಾಜರಿಯ ಬಗ್ಗೆ ಸ್ಪಷ್ಟೀಕರಣವಾಗಬೇಕಾಗಿದೆ)

ಆನೇಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಸದರಿ, ನೌಕರರಿಗೆ ಸಂಬಳವನ್ನು ತೆಗದ ಕೊಳ್ಳುವಂತೆ ದಿನಾಂಕ ೧-೭-೮೫, ೨೮-೭-೮೫ ಮತ್ತು ೭-೮-೮೫ರಲ್ಲಿ ಮೆಮೋ ನೀಡಿರುತ್ತಾರೆ. ಇದಕ್ಕೆ ಸದರಿ ನೌಕರರಿಂದ ಯಾವ ಪ್ರತಿಕ್ರಿಯೆಯೂ ತೋರಿ ಬಂದಿಲ್ಲ. ದಿನಾಂಕ ೧೩-೮-೮೫ರಲ್ಲಿ ಬೆಂಗಳೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸದರಿ ನೌಕರರಿಗೆ (ಸಹಾಯಕ ಶುಶ್ರೂಷಾ ದಾದಿಯವರಿಗೆ) ಸಂಬಳ ತೆಗದುಕೊಳ್ಳಲು ಸೂಚಿಸಿ ಸ್ವೀಕೃತ ಪತ್ರ ಹಚ್ಚಿದ ನೋಂದಾಯಿಸಿದ ಪತ್ರ ಕಳುಹಿಸಲಂ ಆದೇಶ ನೀಡಿದ್ದಾರೆ.

ಆನೇಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಥಮ ದರ್ಜೆ ಗುಮಸ್ತರ ಭ್ರಷ್ಟಾಚಾರದ ಬಗ್ಗೆ ಯಾವ ದೂರುಗಳು ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ,— ಅಧ್ಯಕ್ಷರೇ, ನಾನು ಕೆಲವೊಂದು ಸ್ಪಷ್ಟೀಕರಣವನ್ನು ಕೇಳಲಿಚ್ಚಿಸುತ್ತೇನೆ. ಆ ಸ್ಪಷ್ಟೀಕರಣಕ್ಕೆ ಮಾನ್ಯ ಸಚಿವರು ಉತ್ತರಕೊಡಬೇಕಾಗುತ್ತದೆ. ಸಮರ್ಪಕವಾಗಿ ಉತ್ತರ ಕೊಡದೆ, ಓದಿದ್ದನ್ನೇ ಓದುತ್ತಿದ್ದಾರೆ. ಪ್ರಪ್ರಥಮವಾದ ವಿಚಾರವೇನೆಂದರೆ, ಮೇ, ಜೂನ್ ಮತ್ತು ಜುಲೈ ಈ ಮೂರು ತಿಂಗಳ ಸಂಬಳವನ್ನು ಕೊಟ್ಟಿಲ್ಲ. ಇಲ್ಲಿ ಕೊಟ್ಟಿದ್ದೇವೆ ಎನ್ನುವಂತಹ ಶಬ್ದವನ್ನು ಉಪಯೋಗಿಸಿದ್ದೀರಿ. ಇದು ಸತ್ಯಕ್ಕೆ ದೂರವಾದುದು. ಇನ್ನೊಂದು, ನಗರ ಭತ್ಯೆಯ ಬಗ್ಗೆ ಸಹ ಇದರಲ್ಲಿ ನಮೂದಿಸಿದ್ದೀರಿ ನಗರ ಭತ್ಯೆಯ ವಿಚಾರದಲ್ಲಿ ಹೇಳುವುದಾದರೆ, ಇದು ಕೂಡ ಸತ್ಯಕ್ಕೆ ದೂರವಾದ ವಿಚಾರವನ್ನು ಕೊಟ್ಟಿದ್ದೀರಿ. ಡಿ. ಎ. ನೀಡಿಕೆ ಬಗ್ಗೆ ಕೂಡ ಸತ್ಯಕ್ಕೆ ದೂರವಾದ ವಿಚಾರವನ್ನು ಕೊಟ್ಟಿದ್ದೀರಿ.ಇದರಲ್ಲಿ ಒಂದು ವಿಚಾರವನ್ನು ಹೇಳಲಿಚ್ಚಿಸುತ್ತೇನೆ. ೧೯೮೫ರ ಮೇ, ಜೂನ್ ತಿಂಗಳ ವೇತನ ಅಟೆಂಡೆನ್ಸ್ ಎಕ್ಸ್ಟ್ರಾಕ್ಟ್‌ನಲ್ಲಿ ಬಂದಿಲ್ಲ, ಆದ್ದರಿಂದ ವೇತನವನ್ನು ಕೊಟ್ಟಿಲ್ಲವೆಂಬ ಕಾರಣವನ್ನು ಕೊಟ್ಟಿದ್ದೀರಿ. ಶ್ರೀಮತಿ ಸಿಸಿಲಿಯಾ ಅಯಾ ಎಂತವ್ವ ಯಾರಿಗೆ ಸಂಬಳ ಸಿಗಬೇಕೋ ಅವರಿಗೂ ಕೊಟ್ಟಿಲ್ಲ. ಅಟೆಂಡೆನ್ಸ್ ಎಕ್ಸ್ಟ್ರಾಕ್ಟ್ ಅನ್ನು ಸದರಿ ಸಹಾಯ ಶುಶ್ರೂಷಾ ದಾದಿಯವರು ತಾವು ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿಗಳ ಅಂದರೆ, ಪ್ರಾಥಮಿಕ ಆರೋಗ್ಯ ಘಟಕದ ಜಿಗಣಿಯ ವೈದ್ಯಾಧಿಕಾರಿಗಳಿಂದ ಸಹಿ ಪಡೆಯಲು ತೆಗೆದುಕೊಂಡು ಹೋಗಿದ್ದಾರೆ. ಆದರೂ ಸಹ ಸಂಬಳ ಕೊಡದೇ ಇರಲು ಕಾರಣವೇನು? ಮತ್ತೊಂದು ವಿಚಾರವನ್ನು ತಿಳಿಸಿದ್ದಾರೆ. ೧೯೮೫ರ ಮೇ, ಜೂನ್ ಸಂಬಳವನ್ನು ಬಟವಾಡೆ ಮಾಡಲಾಗಿದೆಯೆಂದು ತಿಳಿಸಿದ್ದಾರೆ ಇದು ಸತ್ಯಕ್ಕೆ ದೂರವಾದ ಮಾತು. ಜಿಗಣಿಯ ವೈದ್ಯಾಧಿಕಾರಿಗಳಿಂದ ಬಂದ ಅಟೆಂಡೆನ್ಸ್ ಎಕ್ಸ್ಟ್ರಾಕ್ಟ್‌ನಲ್ಲಿ ದಿನಾಂಕ ೧-೭-೮೫, ೧೫-೭-೮೫ ೧೬-೭-೮೫ರ ದಿನಗಳಿಗೆ ಗೈರು ಹಾಜರಿಯನ್ನು ಗುರುತಿಸಲಾಗಿದೆ ಎನ್ನುವಂತಹ ವಿಚಾರವನ್ನು ಅಧಿಕಾರಿಗಳು ಹೇಳಿದ್ದಾರೆಂದು ಆ ಪತ್ರದಲ್ಲಿ ತೋರಿಸಿದ್ದೀರಿ. ಗೈರು ಹಾಜರಿ ರಿಜಿಸ್ಟರ್ ಅನ್ನು ತರಿಸಿ ನೋಡಿದರೆ, ಗೈರು ಹಾಜರಿಯಾಗಿದ್ದರೇ ಇಲ್ಲವೇ ಎನ್ನುವುದು ತಿಳಿಯುತ್ತದೆ. ಇದು ಸತ್ಯಕ್ಕೆ ದೂರವಾದ ವಿಚಾರವೆಂದು ತಮ್ಮ ಮುಂದೆ ಅವರಿಗೆ ಹೇಳಲಿಚ್ಚಿಸುತ್ತೇನೆ ಮತ್ತೊಂದು ವಿಚಾರ, ನಗರ ಭತ್ಯೆಯ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಗರಭತ್ಯೆಯೂ ಸೇರಿದಂತೆ ೨೮ ದಿನಗಳಿಗೆ ಮಾತ್ರ ಸಂಬಳವನ್ನು ಮಾಡಿದ್ದಾರೆ. ಅಂದರೆ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕೊಡಬೇಕಾದಂತಹ ನಗರ ಭತ್ಯೆಯ ಬಾಕಿಯ ಬಗ್ಗೆ ಇದರಲ್ಲಿ ನಮೂದಿಸಿಲ್ಲ. ಆನೇಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು

ಸದರಿ. ನೌಕರರಿಗೆ ಸಂಬಳವನ್ನು ತೆಗೆದುಕೊಳ್ಳುವಂತೆ ದಿನಾಂಕ ೧–೭–೮೫, ೨೮–೭–೮೫ ಮತ್ತು ೭–೮–೮೫ರಲ್ಲಿ ಮೆಮೋ ನೀಡಿರುತ್ತಾರೆಂದು ಕೊಟ್ಟಿರುತ್ತೀರಿ- ಆದರೆ ೨೪–೭–೮೫ರಲ್ಲಿ ಮಾತ್ರ ಮೆಮೋ ಕೊಟ್ಟಿದ್ದೀರಿ. ಮೊದಲಿನತಾರೀಖುಗಳಲ್ಲಿ ಕೊಟ್ಟಿರುವಂತಹ ಉತ್ತರ ಸತ್ಯಕ್ಕೆ ದೂರವಾದ ಅಂಶವಾಗಿದೆ ಅದರ ಬಗ್ಗೆ ಉತ್ತರಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ನಾವು ಅಟೆಂಡೆನ್ಸ್ ನೋಡಿ ಉತ್ತರ ಕೊಡುವುದು ಸಾಧ್ಯವಿಲ್ಲದಿರುವಂತಾದ್ದು. ಅಧಿಕಾರಿಗಳಿಂದ ಬಂದಂತಹ ಮಾಹಿತಿ ಮೇಲೆ ಉತ್ತರ ಕೊಟ್ಟಿದ್ದೇವೆ. ಇದರಲ್ಲಿ ಸತ್ಯಕ್ಕೆ ದೂರವಾದ ಪ್ರಸಂಗಗಳಿದ್ದರೆ, ಅದನ್ನು ನಮಗೆ ತೋರಿಸಿಕೊಟ್ಟರೆ, ಸತ್ಯಕ್ಕೆ ದೂರವಾದ ಮಾಹಿತಿಗಳನ್ನು ಯಾವ ಅಧಿಕಾರಿಗಳು ಕೊಟ್ಟಿದ್ದಾರೆಯೋ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ತಮ್ಮಲ್ಲಿ ಮಾಹಿತಿ ಇದ್ದರೆ ಅದನ್ನು ಕಳಿಸಿಕೊಟ್ಟರೆ, ಅಧಿಕಾರಿಗಳು ತಪ್ಪು ಹೇಳಿಕೆಕೊಟ್ಟಿದ್ದರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ. — ಈ ಪರಿಸ್ಥಿತಿ ಯಾವ ಹಂತಕ್ಕೆ ಮುಟ್ಟಿದೆಯೆಂದು ಹೇಳಿದರೆ. ತಮ್ಮ ಸಂಬಳಕ್ಕಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಹ ಸಲ್ಲಿಸಿದ್ದಾರೆ. ದಿನಾಂಕ ೧೬–೭–೮೫ ರಂದು ಸಿ. ಎಮ್. ಲೆಟರ್ ೧೦೮೪ ಡಿ.ಇ ಪಿ. ೮೫ರ ಪ್ರಕಾರ ಪತ್ರ ಬರೆದರೂ ಸಹ ಮೂರು ತಿಂಗಳ ಸಂಬಳವನ್ನು ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಪ್ರಥಮ ದರ್ಜೆ ನೌಕರರಿಂದ ಸಂಬಳ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಶೋಷಣೆ ನಡೆಯುತ್ತಿದೆಯೇನು ಎಂತಹ ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇನೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿ ಇಡುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಲಿಚ್ಛಿಸುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ನಮಗೆ ಕೊಟ್ಟಿರುವಷ್ಟಕ್ಕಂತಹ ಮಾಹಿತಿಯಲ್ಲಿ ಏನಾದರೂ ತಪ್ಪಾಗಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಅವರ ಹತ್ತಿರ ಇರತಕ್ಕಂಥ ಮಾಹಿತಿಯನ್ನು ಕೊಡಲಿ, ಅದನ್ನು ಪರಿಶೀಲನೆ ಮಾಡುತ್ತೇನೆ. ತಪ್ಪು ಮಾಹಿತಿ ಕೊಟ್ಟಿದ್ದರೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ನಿಯಮ 34 ರ ಮೇರೆಗೆ

೧) ತರೀಕೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.—

ಶ್ರೀ ಬಿ, ಆರ್. ನೀಲಕಂಠಪ್ಪ.— ಮಾನ್ಯ ಅಧ್ಯಕ್ಷರೇ, ತರೀಕೆರೆ ತಾಲ್ಲೂಕಿಗೆ ೧೯೮೧ನೇ ಜನ ಗಣತಿಯ ಪ್ರಕಾರ ಗ್ರಾಮಾಂತರ ಕುಡಿಯುವುದಕ್ಕಾಗಿ ನೀರಿನ ಯೋಜನೆಯಲ್ಲಿ ಎಷ್ಟನ್ನು ಅಳವಡಿಸಬಹುದು, ಸಣ್ಣ ಪ್ರಮಾಣದ ಕುಡಿಯುವ ನೀರಿನ ಯೋಜನೆಯನ್ನು ಎಷ್ಟು ಅಳವಡಿಸಬಹುದು? ಗ್ರಾಮೀಣ ಕುಡಿಯುವ ನೀರಿನ ಯೋಜನೆ ಪರಿಸ್ಥಿತಿ ಹೇಗಿದೆ? ಹಾಗೂ ಎಷ್ಟಿವೆ. ಅವುಗಳು ಯಾವ ಹಂತದಲ್ಲಿವೆ? ತರೀಕೆರೆ ತಾಲ್ಲೂಕು ಕುಡಿಯುವ ನೀರಿನ ವ್ಯವಸ್ಥೆ ಹಾಳಾಗಿರುವ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಇದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್ (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).— ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ನೀಡಲು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

2) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಏಕೋಪಾಧ್ಯಾಯ ಪಾಠಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿರುವ ಬಗ್ಗೆ.

ಶ್ರೀ ಹೆಚ್. ಜಿ. ರಾಜೂಗೌಡ.— ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ಇಂದಿನವರೆಗೂ ಮೂವತ್ತೈದು ಏಕೋಪಾಧ್ಯಾಯ ಪಾಠಶಾಲೆಗಳಲ್ಲಿ ಉಪಾಧ್ಯಾಯರು ಬಾರದೇ ಮಕ್ಕಳಿಂದ ಪಾಠಶಾಲೆಗಳು ಇನ್ನೂ ಬೀಗಮುದ್ರಾವಸ್ಥೆಯಲ್ಲಿಯೇ ಇರುತ್ತದೆ. ಸರ್ಕಾರದ ಮೇಲೆ ಈ ಬಗ್ಗೆ ನಾನಾ ತರದ ಒತ್ತಾಯ ತಂದರೂ ನನ್ನ ಬೇಡಿಕೆಗೆ ಮನ್ನಣೆ ದೊರೆತಿಲ್ಲ. ನಮ್ಮ ಕ್ಷೇತ್ರಕ್ಕೆ ಹೋದರೆ ಪೋಷಕರ